**ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ, ವಿರಾಜಪೇಟೆ**

**ಸಿ. ಸಿ. ನಂಃ49/2022**

ಸಿಡಬ್ಲ್ಯುಃ 9
ಪಿಡಬ್ಲ್ಯುಃ 2

ಸಾಕ್ಷಿಯ ಹೆಸರು ಃ ಎನ್.ವಿವೇಕ
ತಂದೆಯ ಹೆಸರು ಃ ದೇವಯ್ಯ
ವಯಸ್ಸು ಃ 53 ವರ್ಷ
ವೃತ್ತಿ ಃ ರೈತ
ವಾಸಸ್ಥಳ ಃ ಅಮ್ಮತ್ತಿ ಗ್ರಾಮ

**ದಿನಾಂಕಃ 11.07.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀಮತಿ ಸಹಾಯಕ ಸರ್ಕಾರಿ ಅಭಿಯೋಜಕರಿಂದ.**

1. ಸಾಕ್ಷಿಯು ಮಹಜರನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದೆ. ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ-1 ಬಿ ಎಂದು ಗುರುತಿಸಲಾಯಿತು. ನಿಪಿ-1 ಕ್ಕೆ ನಾನು ಸಹಿಯನ್ನು ನನ್ನ ಮನೆಯ ಬಳಿ ಮಾಡಿರುತ್ತೇನೆ. ನಿಪಿ-1 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಪೋಲಿಸ್‌ರು ನನ್ನ ಮುಂದೆ ಯಾವುದೇ ವಾಹನವನ್ನು ವಶಪಡಿಸಿಕೊಂಡಿರುವುದಿಲ್ಲ. ನಾನು ಪೋಲಿಸ್‌ರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**ಮುಖ್ಯ ವಿಚಾರಣೆ ಃ ಮುಕ್ತಾಯ**

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**ಪಾಟೀ ಸವಾಲು ಃ ಶ್ರೀಮತಿ ಸಹಾಯಕ ಸರ್ಕಾರಿ ಅಭಿಯೋಜಕರಿಂದ.**

1. ದಿಃ12.12.2021 ರಂದು ಪೋಲಿಸರು ಕೃತ್ಯ ಸ್ಥಳವಾದ ಕಾರ್ಮಾಡು ಗ್ರಾಮದ ಮುಕ್ಕಾಟಿ ಕೊಪ್ಪದ ಶ್ರೀಮತಿ ಅಮ್ಮಂಡ ರಾಣಿ ಮಂದಣ್ಣ ರವರ ವಾಸದ ಮನೆಯ ಮುಂದಿನ ಗೇಟಿನ ಬಳಿ ರಸ್ತೆಗೆ ಬಂದು, ನನ್ನನ್ನು ಮತ್ತು ಚಾಸಾ-10 ರವರನ್ನು ಸದರಿ ಕೃತ್ಯ ಸ್ಥಳಕ್ಕೆ ಬರಮಾಡಿಕೊಂಡು ಈ ಪ್ರಕರಣದ ವಿಚಾರವನ್ನು ತಿಳಿಸಿ, ಮಹಜರು ಸಮಯದಲ್ಲಿ ಪಂಚರಾಗಬೇಕೆಂದು ಕೋರಿಕೊಂಡ ಮೇರೆಗೆ ನಾವುಗಳು ಒಪ್ಪಿದ್ದು, ಚಾಸಾ-2 ರವರು ಕೃತ್ಯ

ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಪೋಲಿಸರು, ಸದರಿ ಸ್ಥಳದಲ್ಲಿ ಮಹಜರನ್ನು ಬರೆದು, ನಂತರ ಚಾಸಾ-2 ರವರು ಅಪಘಾತ ಪಡಿಸಿದ ವಾಹನವನ್ನು, ಆರೋಪಿಯ ಮನೆಯ ಹತ್ತಿರ ನಿಲ್ಲಿಸಿದ್ದು ಎಂದು ತಿಳಿಸಿದ ಮೇರೆಗೆ, ಸದರಿ ಸ್ಥಳದಲ್ಲಿ ಪೋಲಿಸರು ಮಹಜರು ಕ್ರಮ ಜರುಗಿಸಿ ಸದರಿ ವಾಹನವನ್ನು ವಶಪಡಿಸಿಕೊಂಡು, ಮಹಜರನ್ನು ಬರೆದು ನಮ್ಮ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದ ಹೇಳಿಕೆಯನ್ನು ಸಾಕ್ಷಿ ನಿರಾಕರಿಸಿದ್ದು, ಸದರಿ ಹೇಳಿಕೆ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಮುಕ್ತಾಯ

**ಮರು ವಿಚಾರಣೆ :** ಇಲ್ಲ

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇ.

ಸಹಿ/-

ಪ್ರದೀಪ ಪೋತದಾರ
ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ವಿರಾಜಪೇಟೆ

**ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ, ವಿರಾಜಪೇಟೆ**

**ಸಿ. ಸಿ. ನಂಃ49/2022**

ಸಿಡಬ್ಲ್ಯುಃ 10
ಪಿಡಬ್ಲ್ಯುಃ 3

| | |
|---|---|
| ಸಾಕ್ಷಿಯ ಹೆಸರು | ಃ ಜಾನ್ಸನ್ |
| ತಂದೆಯ ಹೆಸರು | ಃ ಲೇಟ್. ವರ್ಗೀಸ್ |
| ವಯಸ್ಸು | ಃ 55 ವರ್ಷ |
| ವೃತ್ತಿ | ಃ ವ್ಯಾಪಾರ |
| ವಾಸಸ್ಥಳ | ಃ ಪುಲಿಯೇರಿ ಗ್ರಾಮ |

**ದಿನಾಂಕಃ 11.07.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀಮತಿ ಸಹಾಯಕ ಸರ್ಕಾರಿ ಅಭಿಯೋಜಕರಿಂದ.**

1. ಸಾಕ್ಷಿಯು ಮಹಜರನ್ನು ನೋಡಿ ಗುರುತಿಸಿದ್ದು, ಅದು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದೆ. ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ-1 ಸಿ ಎಂದು ಗುರುತಿಸಲಾಯಿತು. ನಿಪಿ-1 ಕ್ಕೆ ನಾನು ಸಹಿಯನ್ನು ನನ್ನ ಮನೆಯ ಬಳಿ ಮಾಡಿರುತ್ತೇನೆ. ನಿಪಿ-1 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಪೋಲಿಸ್‌ರು ನನ್ನ ಮುಂದೆ ಯಾವುದೇ ವಾಹನವನ್ನು ವಶಪಡಿಸಿಕೊಂಡಿರುವುದಿಲ್ಲ. ನಾನು ಪೋಲಿಸ್‌ರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**ಮುಖ್ಯ ವಿಚಾರಣೆ ಃ ಮುಕ್ತಾಯ**

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**ಪಾಟೀ ಸವಾಲು ಃ ಶ್ರೀಮತಿ ಸಹಾಯಕ ಸರ್ಕಾರಿ ಅಭಿಯೋಜಕರಿಂದ.**

1. ದಿಃ12.12.2021 ರಂದು ಪೋಲಿಸರು ಕೃತ್ಯ ಸ್ಥಳವಾದ ಕಾರ್ಮಾಡು ಗ್ರಾಮದ ಮುಕ್ಕಾಟಿ ಕೊಪ್ಪದ ಶ್ರೀಮತಿ ಅಮ್ಮಂಡ ರಾಣಿ ಮಂದಣ್ಣ ರವರ ವಾಸದ ಮನೆಯ ಮುಂದಿನ ಗೇಟಿನ ಬಳಿ ರಸ್ತೆಗೆ ಬಂದು, ನನ್ನನ್ನು ಮತ್ತು ಚಾಸಾ-9 ರವರನ್ನು ಸದರಿ ಕೃತ್ಯ ಸ್ಥಳಕ್ಕೆ ಬರಮಾಡಿಕೊಂಡು ಈ ಪ್ರಕರಣದ ವಿಚಾರವನ್ನು ತಿಳಿಸಿ, ಮಹಜರು ಸಮಯದಲ್ಲಿ ಪಂಚರಾಗಬೇಕೆಂದು ಕೋರಿಕೊಂಡ ಮೇರೆಗೆ ನಾವುಗಳು ಒಪ್ಪಿದ್ದು, ಚಾಸಾ-2 ರವರು ಕೃತ್ಯ

ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಪೋಲಿಸರು, ಸದರಿ ಸ್ಥಳದಲ್ಲಿ ಮಹಜರನ್ನು ಬರೆದು, ನಂತರ ಚಾಸಾ-2 ರವರು ಅಪಘಾತ ಪಡಿಸಿದ ವಾಹನವನ್ನು, ಆರೋಪಿಯ ಮನೆಯ ಹತ್ತಿರ ನಿಲ್ಲಿಸಿದ್ದು ಎಂದು ತಿಳಿಸಿದ ಮೇರೆಗೆ, ಸದರಿ ಸ್ಥಳದಲ್ಲಿ ಪೋಲಿಸರು ಮಹಜರು ಕ್ರಮ ಜರುಗಿಸಿ ಸದರಿ ವಾಹನವನ್ನು ವಶಪಡಿಸಿಕೊಂಡು, ಮಹಜರನ್ನು ಬರೆದು ನಮ್ಮ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದ ಹೇಳಿಕೆಯನ್ನು ಸಾಕ್ಷಿ ನಿರಾಕರಿಸಿದ್ದು, ಸದರಿ ಹೇಳಿಕೆ ಭಾಗವನ್ನು ನಿಪಿ-4 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಮುಕ್ತಾಯ

**ಮರು ವಿಚಾರಣೆ :** ಇಲ್ಲ

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇ.

ಸಹಿ/-

ಪ್ರದೀಪ ಪೋತದಾರ
ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ವಿರಾಜಪೇಟೆ